# ಕಾದಂಬರಿ ಆಧಾರಿತ ಕನ್ನಡ ಸಿನಿಮಾಗಳ ಪ್ರಸ್ತುತತೆ

ಮಮತ ಎಂ.

ಉಪನ್ಯಾಸಕರು, ಮಿಲಾಗ್ರಿಸ್ ಕಾಲೇಜು, ಮಂಗಳೂರು

DOI: https://doi.org/10.5281/zenodo.18788229

## ABSTRACT:

ಕನ್ನಡ ಸಾಹಿತ್ಯ ಮತ್ತು ಕನ್ನಡ ಚಿತ್ರರಂಗದ ನಡುವಿನ ಸಂಬಂಧವು ಅತ್ಯಂತ ದೀರ್ಘ ಇತಿಹಾಸವನ್ನು ಹೊಂದಿದೆ. ವಿಶೇಷವಾಗಿ ಕಾದಂಬರಿಗಳನ್ನು ಆಧಾರವಾಗಿ ತೆಗೆದುಕೊಂಡು ನಿರ್ಮಿಸಲಾದ ಸಿನಿಮಾಗಳು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮೌಲ್ಯಗಳನ್ನು ಜನಸಾಮಾನ್ಯರ ಬಳಿಗೆ ತಲುಪಿಸುವಲ್ಲಿ ಮಹತ್ವದ ಪಾತ್ರವಹಿಸಿವೆ. ಈ ಲೇಖನವು ಕಾದಂಬರಿ ಆಧಾರಿತ ಕನ್ನಡ ಸಿನಿಮಾಗಳ ಉದಯ, ಬೆಳವಣಿಗೆ ಹಾಗೂ ಇಂದಿನ ಪ್ರಸ್ತುತತೆಯನ್ನು ವಿಶ್ಲೇಷಿಸುವ ಪ್ರಯತ್ನವಾಗಿದೆ. ಆರಂಭದ ಕಾಲಘಟ್ಟದಿಂದ ಇಂದಿನ ಸಮಕಾಲೀನ ಚಿತ್ರರಂಗದವರೆಗೆ ಕಾದಂಬರಿ ಆಧಾರಿತ ಸಿನಿಮಾಗಳು ಹೇಗೆ ಸಾಮಾಜಿಕ ಬದಲಾವಣೆಯ ಸಾಧನಗಳಾಗಿ ರೂಪುಗೊಂಡಿವೆ ಎಂಬುದನ್ನು ಇಲ್ಲಿ ಚರ್ಚಿಸಲಾಗಿದೆ.

## KEYWORDS:

ಕನ್ನಡ ಸಾಹಿತ್ಯ, ಕಾದಂಬರಿ, ಕನ್ನಡ ಚಿತ್ರರಂಗ, ಸಾಹಿತ್ಯಾಧಾರಿತ ಸಿನಿಮಾ, ಸಾಮಾಜಿಕ ಪ್ರಸ್ತುತತೆ.

### ಪೀಠಿಕೆ

ಕನ್ನಡ ಸಾಹಿತ್ಯವು ತನ್ನ ಸಮೃದ್ಧ ಪರಂಪರೆಯ ಮೂಲಕ ಸಮಾಜದಲ್ಲಿ ಮೌಲ್ಯಯುತ ವಿಚಾರಧಾರೆಗಳನ್ನು ಬೆಳೆಸಿದೆ. ಈ ಸಾಹಿತ್ಯ ಪರಂಪರೆಯ ಪ್ರಮುಖ ಅಂಗವಾಗಿರುವ ಕಾದಂಬರಿಗಳು ಮಾನವ ಜೀವನದ ಸೂಕ್ಷ್ಮತೆಗಳನ್ನು ಅತ್ಯಂತ ಆಪ್ತವಾಗಿ ಮತ್ತು ಆಳವಾಗಿ ದಾಖಲಿಸಿದೆ. ಇಂತಹ ಕಾದಂಬರಿಗಳನ್ನು ಚಿತ್ರಮಾಧ್ಯಮದ ಮೂಲಕ ಜನಸಾಮಾನ್ಯರಿಗೆ ತಲುಪಿಸುವ ಪ್ರಯತ್ನವೇ ಕಾದಂಬರಿ ಆಧಾರಿತ ಸಿನಿಮಾಗಳು. ಚಿತ್ರರಂಗವು ದೃಶ್ಯ–ಶ್ರವ್ಯ ಮಾಧ್ಯಮವಾಗಿರುವುದರಿಂದ ಸಾಹಿತ್ಯದ ಸಂದೇಶವನ್ನು ಹೆಚ್ಚು ಪರಿಣಾಮಕಾರಿಯಾಗಿ ವಿಸ್ತೃತ ಪ್ರೇಕ್ಷಕರಿಗೆ ತಲುಪಿಸುವ ಸಾಮರ್ಥ್ಯವನ್ನು ಹೊಂದಿದೆ.

### ಕನ್ನಡ ಚಿತ್ರರಂಗದಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳ ಇತಿಹಾಸ

ಸಾಹಿತ್ಯ ಮತ್ತು ಚಲನಚಿತ್ರ ಇವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಕಥೆ, ಸಂಗೀತ, ಕಾವ್ಯ, ಕನಸು, ಭಾವನೆ, ಪ್ರೀತಿ ಇವೆಲ್ಲವೂ ಮೇಳೈಸಿರುವ ಕಲೆ ಚಲನಚಿತ್ರ. ಸಾಹಿತಿ ತನ್ನ ಅನುಭವ, ಅನಿಸಿಕೆಗಳನ್ನು ಕಾಲ್ಪನಿಕ

ಕಥೆಯ ಮೂಲಕ ಮಾತುಗಳಲ್ಲಿ ಕಟ್ಟಿಕೊಟ್ಟರೆ, ನಿರ್ದೇಶಕ ಚಿತ್ರಕಥೆ ದೃಶ್ಯಗಳ ಮೂಲಕ ಅವುಗಳನ್ನು ತೆರೆಯ ಮೇಲೆ ಮೂಡಿಸುವ ಕೆಲಸ ಮಾಡುತ್ತಾನೆ. ಚಲನಚಿತ್ರ ದೃಶ್ಯ ಮಾಧ್ಯಮವಾದರೂ ಅನುಭವದ ದೃಷ್ಟಿಯಿಂದ ಅದು ಸಾಹಿತ್ಯದಂತೆ ಮನಸ್ಸಿಗೆ ಸಂಬಂಧಿಸಿದ ಕಲೆಯಾಗಿದೆ. ಸಾಹಿತ್ಯ ವಿದ್ಯಾವಂತರಿಗೆ ಜ್ಞಾನದ ಮೂಲಕ ತಲುಪಿದರೆ, ಚಲನಚಿತ್ರ ಚಲನೆ, ಧ್ವನಿ, ದೃಶ್ಯ, ಸಂಭಾಷಣೆ, ಹಾಡುಗಳ ಮೂಲಕ ಜನರನ್ನು ತಲುಪಿದೆ. ಇನ್ನೊಂದೆಡೆ ಚಲನಚಿತ್ರಕ್ಕೆ ಸಾಹಿತ್ಯ ಜೀವಂತಿಕೆಯನ್ನು ತುಂಬುವ ಮೂಲಕ ವಿಜ್ಞಾನ ಮತ್ತು ತಂತ್ರಜ್ಞಾನದಿಂದ ಅದು ಇನ್ನೂ ಹೆಚ್ಚು ಸೊಗಸಾಗಿ ಬೆಳ್ಳಿ ತೆರೆಯ ಮೇಲೆ ಕಾಣಿಸಿಕೊಳ್ಳುತ್ತದೆ.

ಪ್ರಾರಂಭದಲ್ಲಿ ಮೂಕಿ ಚಿತ್ರಗಳು ತೆರೆಯ ಮೇಲೆ ಕಾಣಿಸಿಕೊಂಡರೂ ನಿಧಾನಕ್ಕೆ ರಂಗದಲ್ಲಿ ಕಾಣಿಸಿಕೊಂಡ ಪೌರಾಣಿಕ ನಾಟಕಗಳೂ ತೆರೆಯ ಮೇಲೆ ಕಾಣಿಸಿಕೊಂಡವು. ಪೌರಾಣಿಕ ಚಿತ್ರಗಳನ್ನೇ ವೀಕ್ಷಿಸುತ್ತಿದ್ದ ಜನರಿಗೆ ಸ್ವಲ್ಪ ಬದಲಾವಣೆ ನೀಡಿದ್ದೇ ಕಾದಂಬರಿ ಆಧಾರಿತ ಸಿನಿಮಾಗಳು. ಇದು ವರ್ತಮಾನದ ತವಕ–ತಲ್ಲಣಗಳನ್ನು ವಿವರವಾಗಿ ಬಿಂಬಿಸುವಲ್ಲಿ ಸಹಾಯಕವಾಗಿರುವುದರಿಂದ ಕೆಲವು ನಿರ್ದೇಶಕರು ಇದರ ಕಡೆಗೆ ಹೆಚ್ಚು ಗಮನ ನೀಡಿದ್ದರು. ಪರಿಣಾಮವಾಗಿ ಚಲನಚಿತ್ರಗಳು ಯಶಸ್ಸಿನತ್ತ ಹೊರಳಿದ್ದನ್ನು ಗಮನಿಸಿದ ನಿರ್ದೇಶಕರು ಕಥೆ, ಕಾದಂಬರಿಯ ವಸ್ತುವನ್ನು ಚಲನಚಿತ್ರಕ್ಕೆ ಕಥೆಯನ್ನಾಗಿ ಇಟ್ಟುಕೊಂಡು ಯಶಸ್ವಿಯಾದರು. ಭಾರತದ ಯಾವುದೇ ಭಾಷೆಯ ಚಿತ್ರರಂಗವನ್ನು ತೆಗೆದುಕೊಂಡರೂ ಕಾದಂಬರಿ ಆಧಾರಿತ ಚಲನಚಿತ್ರಗಳದ್ದೇ ಸಿಂಹಪಾಲು. ಕನ್ನಡ ಚಿತ್ರರಂಗವು ಇದಕ್ಕೆ ಹೊರತಾಗಿಲ್ಲ. ಕನ್ನಡ ಸಾಹಿತ್ಯ ಪರಂಪರೆ ಇಲ್ಲಿಯೂ ಬೆಳೆಯುತ್ತಾ ಅದು ತನ್ನದೇ ಆದ ಬದಲಾವಣೆಗಳಿಗೆ ತೆರೆದುಕೊಳ್ಳುತ್ತಿದೆ. ಕರಾವಳಿಯ ಕನ್ನಡ ಸಾಹಿತ್ಯವೂ ಇದೇ ದಾರಿಯಲ್ಲಿ ಸಾಗಿ ಹೊಸತನದ ಆವಿಷ್ಕಾರಗಳಿಗೆ ಒಗ್ಗಿಕೊಂಡಿದೆ.

ಕನ್ನಡ ಚಿತ್ರರಂಗದ ಆರಂಭಿಕ ಹಂತದಲ್ಲಿಯೇ ಸಾಹಿತ್ಯಾಧಾರಿತ ಚಿತ್ರಗಳ ಪ್ರಭಾವ ಕಂಡುಬರುತ್ತದೆ. ಕುವೆಂಪು, ತ್ರಿವೇಣಿ, ಎಸ್.ಎಲ್. ಭೈರಪ್ಪ, ಯು.ಆರ್. ಅನಂತಮೂರ್ತಿ, ಶಿವರಾಮ ಕಾರಂತ, ವಿಶುಕುಮಾರ್, ವೀರಪ್ಪ ಮೊಯ್ಲಿ ಹೀಗೆ ಅನೇಕ ಸಾಹಿತಿಗಳ ಕೃತಿಗಳು ಚಿತ್ರರೂಪ ಪಡೆದಿರುವುದು ಕನ್ನಡ ಚಿತ್ರರಂಗದ ಮಹತ್ವದ ಘಟ್ಟವಾಗಿದೆ. "ನಾಗರಹಾವು" (ತ್ರಿವೇಣಿ ಅವರ ಕಾದಂಬರಿಯನ್ನು ಆಧರಿಸಿದ ಸಿನಿಮಾ) ಕನ್ನಡ ಚಿತ್ರರಂಗದಲ್ಲಿ ಹೊಸ ಚಿಂತನೆ ಮತ್ತು ಯೌವನದ ಭಾವನೆಗಳನ್ನು ಪ್ರತಿಬಿಂಬಿಸಿದ ಐತಿಹಾಸಿಕ ಚಿತ್ರವಾಗಿದೆ. ಅದೇ ರೀತಿ "ಘಟಶ್ರಾದ್ಧ", "ಸಂಸ್ಕಾರ", "ತಬರನ ಕಥೆ" ಮುಂತಾದ ಸಿನಿಮಾಗಳು ಸಾಹಿತ್ಯದ ಗಂಭೀರತೆಯನ್ನು ಚಿತ್ರಮಾಧ್ಯಮದಲ್ಲಿ ಯಶಸ್ವಿಯಾಗಿ ಮೂಡಿಸಿವೆ.

ಕನ್ನಡ ಚಿತ್ರರಂಗದ ಬೆಳವಣಿಗೆಯ ಘಟ್ಟದಲ್ಲಿ ವಿಶೇಷವಾಗಿ ಕಾದಂಬರಿ ಆಧಾರಿತ ಸಿನಿಮಾಗಳು ಪ್ರಮುಖ ಪಾತ್ರವನ್ನು ವಹಿಸಿಕೊಂಡಿವೆ. ಕನ್ನಡ ಸಾಹಿತ್ಯದ ಸಮೃದ್ಧ ಪರಂಪರೆಯು ಚಿತ್ರರಂಗಕ್ಕೆ ಶಕ್ತಿಯುತ ಕಥಾವಸ್ತು ಒದಗಿಸಿದೆ. ಕನ್ನಡ

ಚಿತ್ರರಂಗದ ಆರಂಭಿಕ ಹಂತದಲ್ಲಿ ಪೌರಾಣಿಕ ಮತ್ತು ಐತಿಹಾಸಿಕ ಕಥೆಗಳ ಪ್ರಾಬಲ್ಯ ಹೆಚ್ಚು ಕಂಡುಬಂದರೂ, ಸಾಹಿತ್ಯಾಧಾರಿತ ಕಥೆಗಳ ಪ್ರೇರಣೆಯೂ ನಿಧಾನವಾಗಿ ಬೆಳೆಯತೊಡಗಿತು. ಆರಂಭದಲ್ಲಿ ರಂಗದ ಮೇಲೆ ಪ್ರಯೋಗಗೊಳ್ಳುತ್ತಿದ್ದ ಪೌರಾಣಿಕ ನಾಟಕಗಳನ್ನೇ ಸಿನಿಮಾಗಳನ್ನಾಗಿ ಮಾಡಿದ ಉದಾಹರಣೆಗಳು ಇವೆ. 'ಭಕ್ತಪ್ರಹ್ಲಾದ' ಸಿನಿಮಾವು ನಾಟಕವಾಗಿ ಕೂಡ ರಂಗದಲ್ಲಿ ಪ್ರಯೋಗಗೊಂಡಿತ್ತು. ಸಿನಿಮಾದಲ್ಲಿ ಅದು ಇನ್ನಷ್ಟು ಪ್ರಸಿದ್ಧಿಯನ್ನು ಪಡೆದು ಇಂದಿನ ಯುವಜನತೆ ಕೂಡ ಆ ಸಿನಿಮಾವನ್ನು ಮೆಚ್ಚುವುದಿದೆ. ಈ ಕಾಲಘಟ್ಟದಲ್ಲಿ ನೇರವಾಗಿ ಕಾದಂಬರಿಗಳನ್ನು ಆಧರಿಸಿದ ಸಿನಿಮಾಗಳ ಸಂಖ್ಯೆ ಕಡಿಮೆ ಇದ್ದರೂ, ಸಾಹಿತ್ಯದ ಕಡೆ ಒಲವು ನಿಧಾನವಾಗಿ ಮೂಡಿತು.

1950ರಿಂದ 1970ರವರೆಗಿನ ಕಾಲಘಟ್ಟವನ್ನು ಕನ್ನಡ ಚಿತ್ರರಂಗದ ಸ್ವರ್ಣಯುಗವೆಂದು ಪರಿಗಣಿಸಲಾಗುತ್ತದೆ. ಈ ಅವಧಿಯಲ್ಲಿ ಕನ್ನಡ ಸಾಹಿತ್ಯದ ಶ್ರೇಷ್ಠ ಕಾದಂಬರಿಗಳು ಚಿತ್ರರೂಪ ಪಡೆಯಲಾರಂಭಿಸಿದವು. ತ್ರಿವೇಣಿ ಅವರ ಕಾದಂಬರಿಯನ್ನು ಆಧರಿಸಿದ "ನಾಗರಹಾವು" (1972) ಆ ಸಂದರ್ಭದಲ್ಲಿ ಚಿತ್ರರಂಗದಲ್ಲಿ ಒಂದು ಹೊಸ ಸಂಚಲನವನ್ನು ಮೂಡಿಸಿತು. ಸಾಮಾಜಿಕ ಸಂಬಂಧಗಳು ಮತ್ತು ಆಧುನಿಕ ಚಿಂತನೆಗಳನ್ನು ಚಿತ್ರಿಸುವ ಮೂಲಕ ಹೊಸತನವನ್ನು ಪರಿಚಯಿಸಿತು.

1970 ಮತ್ತು 80ರ ದಶಕಗಳಲ್ಲಿ ಕನ್ನಡ ಸಾಹಿತ್ಯದ ನವ್ಯ ಚಳವಳಿಯ ಪ್ರಭಾವ ಚಿತ್ರರಂಗದಲ್ಲಿ ಗಾಢವಾಗಿ ಪ್ರತಿಫಲಿಸಿತು. ಯು.ಆರ್. ಅನಂತಮೂರ್ತಿ, ಎಸ್.ಎಲ್. ಭೈರಪ್ಪ, ಪಿ. ಲಂಕೇಶ್, ಶಿವರಾಮ ಕಾರಂತರು ಮುಂತಾದ ಲೇಖಕರ ಕಾದಂಬರಿಗಳು ಹಾಗೂ ಕಥೆಗಳು ಸಿನಿಮಾಗಳಾಗಿ ರೂಪುಗೊಂಡವು. "ಸಂಸ್ಕಾರ", "ಘಟಶ್ರಾದ್ಧ", "ತಬರನ ಕಥೆ", 'ಚೋಮನದುಡಿ' ಮುಂತಾದ ಸಿನಿಮಾಗಳು ಸಾಮಾಜಿಕ ಮೌಲ್ಯ, ವ್ಯಕ್ತಿಯ ಅಂತರಂಗದ ಹೋರಾಟವನ್ನು ಚಿತ್ರಿಸುವ ಮೂಲಕ ಕನ್ನಡ ಸಿನಿಮಾದ ಹೊಸ ಪರಂಪರೆಯನ್ನು ಪರಿಚಯಿಸಿತು. ಈ ಹಂತದಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳು ವಾಣಿಜ್ಯಕ್ಕಿಂತ ಕಲಾತ್ಮಕತೆಯನ್ನು ಹೆಚ್ಚು ಒತ್ತಿಹೇಳಿದವು. ಸ್ವತಃ ಶಿವರಾಮ ಕಾರಂತರೇ ನಟನಾಗಿ, ನಿರ್ದೇಶಕನಾಗಿ, ಕಥೆಗಾರನಾಗಿ ಸಿನಿಮಾದಲ್ಲಿ ಕಾರ್ಯನಿರ್ವಹಿಸಿದ್ದು ಒಂದು ವಿಶೇಷ. ಕಲಾತ್ಮಕ ಚಿತ್ರಗಳು ಒಂದು ರೀತಿಯಲ್ಲಿ ಜನರಲ್ಲಿ ಭಾವನಾತ್ಮಕವಾದ ಮತ್ತು ಸಾಮಾಜಿಕ ಸಂದೇಶವನ್ನು ನೀಡುವ ಮೂಲಕ ಅಲ್ಲಿ ನಡೆಯುವ ಕಥೆಗಳು ತನ್ನ ಮನೆಯ ಕಥೆಯೇ ಅಥವಾ ತನ್ನದೇ ಕಥೆಯೇ ಎಂಬಂತೆ ಜನ ಒಪ್ಪಿಕೊಳ್ಳುತ್ತಿದ್ದರು. ಪೌರಾಣಿಕ ಚಿತ್ರಗಳ ಕಡೆಯಿಂದ ಜನ ಕಲಾತ್ಮಕ ಚಿತ್ರಗಳ ಕಡೆಗೆ ಹೊರಳಿದ್ದು ಸಿನಿಮಾ ಜಗತ್ತಿನಲ್ಲಿ ಒಂದು ಹೊಸ ಪ್ರಯೋಗಕ್ಕೆ ತೆರೆದುಕೊಂಡಂತಾಯಿತು. ಇವತ್ತಿಗೂ ಕಲಾತ್ಮಕ ಸಿನಿಮಾಗಳು ಬೆಳ್ಳಿತೆರೆಯ ಮೇಲೆ ಮೂಡಿ ಬಂದಾಗ ಟಾಕೀಸುಗಳಲ್ಲಿ ತುಂಬಾ ದಿನ ಓಡದೆ ಇದ್ದರೂ ಜನರ ಮನಸ್ಸಿನಲ್ಲಿ ಮಾತ್ರ ಅಚ್ಚಳಿಯದೆ ನಿಲ್ಲುತ್ತವೆ.

1990ರ ದಶಕದ ನಂತರ ಕನ್ನಡ ಚಿತ್ರರಂಗದಲ್ಲಿ ವಾಣಿಜ್ಯ ಪ್ರಧಾನ ಚಿತ್ರಗಳ ಪ್ರಾಬಲ್ಯ ಹೆಚ್ಚಾಯಿತು. ಈ ಅವಧಿಯಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಯಿತು. ಆದರೂ ಕೆಲವು ನಿರ್ದೇಶಕರು ಸಾಹಿತ್ಯದತ್ತ ಮುಖಮಾಡಿ ಗಂಭೀರ ಪ್ರಯತ್ನಗಳನ್ನು ನಡೆಸಿದರು. ಹೊಡಿಬಡಿ, ಪ್ರೀತಿಗೀತಿ ಇತ್ಯಾದಿ ವಿಚಾರಗಳು ಬಂದಮೇಲೆ ಕತೆಯೇ ಬೇಡ. ಡ್ಯಾನ್ಸು, ಫೈಟು, ಪ್ರೀತಿ ಪ್ರೇಮ ಹೀಗೆ ದ್ವಂದ್ವವಾದ ಚಿತ್ರಗಳು ಪೈಪೋಟಿಯಲ್ಲಿ ಬರುವುದಕ್ಕೆ ಆರಂಭವಾಯಿತು. ಆಗಲೇ ಕನ್ನಡ ಚಿತ್ರರಂಗ ತನ್ನ ಮೌಲ್ಯವನ್ನು ಕಳೆದುಕೊಂಡಿತು ಎನ್ನಬಹುದು. ಹೀಗಾಗಿ ವರ್ಷಕ್ಕೆ ಬೆರಳೆಣಿಕೆಯಷ್ಟು ತಯಾರಾಗುತ್ತಿದ್ದ ಸಿನಿಮಾಗಳು ಇಂದು ನೂರರ ಗಡಿ ದಾಟಿದೆ. ಐದು ದಶಕಗಳಾದರೂ ಮರೆಯದಂಥ ಹಳೆಯ ಹಾಡುಗಳ ನಡುವೆ, ಮ್ಯೂಸಿಕ್ ಇನ್‌ಸ್ಟ್ರುಮೆಂಟ್ಸ್‌ಗೇ ಕರೆಂಟ್ ಶಾಕ್ ಹೊಡೆದಂತೆ ಬಂದ ಗೀತೆಗಳು ಶ್ರೋತೃವಿನ ಮನದಾಳದಲ್ಲಿ ಅಚ್ಚಳಿಯದೆ ಉಳಿಯುವುದಕ್ಕೆ ಸೋತುಹೋಯಿತು. ಹಾಡಿನ ಸಾಹಿತ್ಯವಂತೂ ಜೀರ್ಣಿಸಿಕೊಳ್ಳುವುದಕ್ಕೆ ಅಸಾಧ್ಯವಾಯಿತು. ಕಾದಂಬರಿಗಳು ಸರ್ಕಾರಿ ಲೈಬ್ರರಿಗಳಲ್ಲಿ ಧೂಳು ಹಿಡಿದು ಮಂಕಾಗಿ ಹೋದವು. ಕಾದಂಬರಿಗಳನ್ನು ಓದುವ ಓದುಗರ ಸಂಖ್ಯೆಯೂ ಕಡಿಮೆಯಾದಂತೆ ಕಾದಂಬರಿ ಆಧಾರಿತ ಸಿನಿಮಾಗಳು ತೆರೆಯ ಮೇಲೆ ಬರುವುದು ಕನಸಿನ ಮಾತಾಯಿತು. ಕಲಾತ್ಮಕ ಚಿತ್ರಗಳೆಂದರೆ ಅವುಗಳಿಂದ ದುಡ್ಡುಮಾಡಲು ಸಾಧ್ಯವಿಲ್ಲ. ಜನ ನೋಡುವುದಿಲ್ಲ, ಟಾಕೀಸ್ ಸಿಗುವುದಿಲ್ಲ, ಸಿಕ್ಕರೂ ಒಂದು ವಾರಕ್ಕಿಂತ ಹೆಚ್ಚು ಓಡುವುದು ಕಷ್ಟ. ಆದರೆ ಇವೆಲ್ಲವನ್ನೂ ಮೀರಿಸಿದ್ದು ಪುಟ್ಟಣ್ಣನವರು ತೆಗೆದ ಎಂ.ಕೆ. ಇಂದಿರಾ, ಸಾಯಿಸುತೆ ಇತರ ಪ್ರಮುಖರು ರಚಿಸಿದ ಕಾದಂಬರಿ ಆಧಾರಿತ ಚಿತ್ರಗಳು, ಡಾ. ರಾಜ್ ಅಭಿನಯಿಸಿದ ಹಲವಾರು ಕಾದಂಬರಿ ಆಧಾರಿತ ಚಿತ್ರಗಳೆಲ್ಲವೂ ಕಮರ್ಶಿಯಲಿ ದೊಡ್ಡ ಯಶಸ್ಸನ್ನೇ ಕೊಟ್ಟಿದ್ದವು. ಇಂದಿಗೂ ಜನ ಅವುಗಳ ಗುಂಗಿಗೆ ಬೀಳುತ್ತಾರೆ.

**ಕಾದಂಬರಿ ಆಧಾರಿತ ಸಿನಿಮಾಗಳ ಸಾಮಾಜಿಕ ಪ್ರಸ್ತುತತೆ**

ಕಾದಂಬರಿ ಆಧಾರಿತ ಸಿನಿಮಾಗಳು ಕೇವಲ ಮನರಂಜನೆಗೆ ಸೀಮಿತವಾಗದೆ ಸಮಾಜದ ಸಮಸ್ಯೆಗಳನ್ನು, ಮೌಲ್ಯ ಸಂಕಟಗಳನ್ನು ಹಾಗೂ ಮಾನವೀಯ ಪ್ರಶ್ನೆಗಳನ್ನು ಎತ್ತಿ ಹಿಡಿದಿವೆ. ಜಾತಿ ವ್ಯವಸ್ಥೆ, ಲಿಂಗ ಅಸಮಾನತೆ, ಗ್ರಾಮೀಣ ಜೀವನದ ಸಂಕಷ್ಟಗಳು, ಆಧುನಿಕತೆಯ ಒತ್ತಡಗಳು ಮುಂತಾದ ವಿಷಯಗಳನ್ನು ಈ ಸಿನಿಮಾಗಳು ಪರಿಣಾಮಕಾರಿಯಾಗಿ ಪ್ರತಿಪಾದಿಸಿವೆ. ಸಾಮಾಜಿಕ, ಸಾಂಸ್ಕೃತಿಕ ಹಾಗೂ ಮಾನವೀಯ ಬದುಕನ್ನು ಆಳವಾಗಿ ದಾಖಲಿಸಿರುವುದು ಕನ್ನಡ ಕಾದಂಬರಿಗಳ ಮಹತ್ವದ ವೈಶಿಷ್ಟ್ಯವಾಗಿದೆ. ಇಂತಹ ಕಾದಂಬರಿಗಳನ್ನು ಚಿತ್ರರೂಪದಲ್ಲಿ ರೂಪಿಸುವ ಮೂಲಕ ಸಮಾಜದ ಸಂಕೀರ್ಣ ವಾಸ್ತವತೆಗಳನ್ನು ಜನಸಾಮಾನ್ಯರ ಬಳಿಗೆ ತಲುಪಿಸುವಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳು ಪ್ರಮುಖ ಪಾತ್ರವಹಿಸಿವೆ. ಇವು ಕೇವಲ ಮನರಂಜನೆಯ ಮಾಧ್ಯಮಗಳಾಗಿರದೆ, ಸಮಾಜಕ್ಕೆ ಚಿಂತನೆ ಮತ್ತು ಆತ್ಮಪರಿಶೀಲನೆಯ ದಿಕ್ಕನ್ನು ನೀಡುವ ಸಾಧನಗಳಾಗಿವೆ. ಶಿವರಾಮ ಕಾರಂತರ 'ಚೋಮನದುಡಿ', 'ಕುಡಿಯರ ಕೂಸು' ಅಂದಿನ ಕಾಲದ ಸಾಮಾಜಿಕ ಸಮಸ್ಯೆಯ

ಬಗ್ಗೆ ಬೆಳಕು ಚೆಲ್ಲುತ್ತದೆ.

ಸಾಮಾಜಿಕ ಅಸಮಾನತೆ ಮತ್ತು ಶೋಷಣೆಯ ಬಗ್ಗೆ ಕಾದಂಬರಿ ಆಧಾರಿತ ಸಿನಿಮಾಗಳು ಅತ್ಯಂತ ಪ್ರಸ್ತುತವಾಗುತ್ತವೆ. ಜಾತಿ ವ್ಯವಸ್ಥೆ, ವರ್ಗಭೇದ, ಲಿಂಗ ಅಸಮಾನತೆ ಮತ್ತು ಆರ್ಥಿಕ ಶೋಷಣೆ ಮುಂತಾದ ಸಮಸ್ಯೆಗಳನ್ನು ಕನ್ನಡ ಕಾದಂಬರಿಗಳು ವಾಸ್ತವಾಧಾರಿತವಾಗಿ ಚಿತ್ರಿಸಿವೆ. ಉದಾಹರಣೆಗೆ, ಯು.ಆರ್. ಅನಂತಮೂರ್ತಿಯ "ಸಂಸ್ಕಾರ" ಕಾದಂಬರಿಯನ್ನು ಆಧರಿಸಿದ ಸಿನಿಮಾ ಸಮಾಜದ ಸಂಪ್ರದಾಯಬದ್ಧ ಚಿಂತನೆಗಳು ಮತ್ತು ವ್ಯಕ್ತಿಯ ಅಂತರಾತ್ಮದ ನಡುವಿನ ಸಂಘರ್ಷವನ್ನು ಬಿಂಬಿಸುತ್ತದೆ. ಇಂತಹ ಚಿತ್ರಗಳು ಸಮಾಜದಲ್ಲಿ ಅಡಗಿದ ಅಸಮಾನತೆಯನ್ನು ಪ್ರಶ್ನಿಸುವಂತಿದೆ. ವ್ಯಾಸರಾಯ ಬಳ್ಳಾಲರ 'ಅನುರಕ್ತೆ' ಕಾದಂಬರಿ ಆಧಾರಿತ ಸಿನಿಮಾ ಸಮಾಜದಲ್ಲಿ ಕಾಡುವ ವರ್ಣಭೇದದ ಬಗ್ಗೆ ತಿಳಿಸುತ್ತದೆ.

ಗ್ರಾಮೀಣ ಜೀವನ ಮತ್ತು ಜನಪದ ಸಂಸ್ಕೃತಿಯನ್ನು ಪರಿಚಯಿಸುವಲ್ಲಿ ಕೂಡ ಕಾದಂಬರಿ ಆಧಾರಿತ ಸಿನಿಮಾಗಳ ಪಾತ್ರ ವಿಶಿಷ್ಟವಾಗಿದೆ. ನಗರಕೇಂದ್ರಿತ ಕಥನಗಳ ನಡುವೆ ಗ್ರಾಮೀಣ ಬದುಕಿನ ಸರಳತೆ, ಸಂಕಷ್ಟಗಳು ಮತ್ತು ಸಂಸ್ಕೃತಿಯನ್ನು ಚಿತ್ರಿಸುವ ಸಿನಿಮಾಗಳು ಸಮಾಜದ ಮೂಲ ಬೇರುಗಳನ್ನು ನೆನಪಿಸುತ್ತವೆ. ಎಸ್. ಎಲ್. ಭೈರಪ್ಪ ಅವರ ಕಾದಂಬರಿಗಳನ್ನು ಆಧರಿಸಿದ ಸಿನಿಮಾಗಳು ಗ್ರಾಮೀಣ ಸಮಾಜದ ಮೌಲ್ಯ ಸಂಕಟಗಳನ್ನು ಸೂಕ್ಷ್ಮವಾಗಿ ದಾಖಲಿಸಿರುವುದು ಗಮನಾರ್ಹವಾಗಿದೆ. ವೈದೇಹಿಯವರ ಕಥೆಗಳನ್ನಾಧರಿಸಿದ ಸಿನಿಮಾಗಳು ಕೂಡ ಇದೇ ಹಿನ್ನೆಲೆಯಲ್ಲಿ ರಚನೆಯಾಗಿದೆ.

ಸ್ತ್ರೀ ಬದುಕು ಮತ್ತು ಲಿಂಗ ಸಂವೇದನೆಗಳ ಅಭಿವ್ಯಕ್ತಿಗೆ ಕಾದಂಬರಿ ಆಧಾರಿತ ಸಿನಿಮಾಗಳು ಪ್ರಸ್ತುತವೆನಿಸುತ್ತದೆ. ಮಹಿಳೆಯರ ಮೇಲೆ ಸಮಾಜ ಹೇರಿರುವ ನಿರ್ಬಂಧಗಳು, ಕುಟುಂಬ ಮತ್ತು ಸಮಾಜದೊಳಗಿನ ಅವರ ಹೋರಾಟಗಳು ಹಾಗೂ ಆತ್ಮಗೌರವದ ಪ್ರಶ್ನೆಗಳು ಕಾದಂಬರಿಗಳ ಪ್ರಮುಖ ವಿಷಯಗಳಾಗಿವೆ. ಇವು ಚಿತ್ರರೂಪದಲ್ಲಿ ಮೂಡಿದಾಗ, ಪ್ರೇಕ್ಷಕರಲ್ಲಿ ಲಿಂಗ ಸಮಾನತೆಯ ಕುರಿತು ಚರ್ಚೆ ಮತ್ತು ಜಾಗೃತಿ ಮೂಡುತ್ತದೆ. ವೈದೇಹಿಯವರ 'ಅಮ್ಮಚಿ ಎಂಬ ನೆನಪು' ಈ ನಿಟ್ಟಿನಲ್ಲಿ ಅರ್ಥಪೂರ್ಣವಾಗಿದೆ.

ಮೌಲ್ಯ ಸಂಕಟ ಮತ್ತು ಆಧುನಿಕತೆಯ ಸಂಘರ್ಷವನ್ನು ಚಿತ್ರಿಸುವಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳು ಸಮರ್ಥವಾಗಿವೆ. ಪರಂಪರೆ ಮತ್ತು ಆಧುನಿಕತೆಯ ನಡುವಿನ ಘರ್ಷಣೆ, ಧರ್ಮ, ನೀತಿ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಪ್ರಶ್ನೆಗಳು ಸಮಕಾಲೀನ ಸಮಾಜದಲ್ಲಿ ಹೆಚ್ಚು ಪ್ರಸ್ತುತವಾಗಿವೆ. "ಘಟಶ್ರಾದ್ಧ", "ತಬರನ ಕಥೆ" ಮುಂತಾದ ಸಿನಿಮಾಗಳು ವ್ಯಕ್ತಿಯ ಅಂತರಂಗದ ಸಂಕಟವನ್ನು ಸಾಮಾಜಿಕ ನೆಲೆಯಲ್ಲಿ ವಿಶ್ಲೇಷಿಸುತ್ತವೆ.

ಸಾಮಾಜಿಕ ಜಾಗೃತಿ ಮತ್ತು ಬದಲಾವಣೆಯ ಪ್ರೇರಣೆಗೆ ಕಾದಂಬರಿ ಆಧಾರಿತ

ಸಿನಿಮಾಗಳು ಕಾರಣವಾಗಿವೆ. ಇಂತಹ ಸಿನಿಮಾಗಳು ಪ್ರೇಕ್ಷಕರನ್ನು ಕೇವಲ ಕಥೆಯನ್ನು ನೋಡುವವರಾಗಿರದೆ, ಸಮಾಜದ ಸಮಸ್ಯೆಗಳ ಬಗ್ಗೆ ಚಿಂತಿಸುವ ನಾಗರಿಕರನ್ನಾಗಿ ರೂಪಿಸುತ್ತವೆ. ಕೆಲವೊಮ್ಮೆ ಇವು ಸಾರ್ವಜನಿಕ ಚರ್ಚೆ, ವಿಮರ್ಶೆ ಹಾಗೂ ಸಾಮಾಜಿಕ ಚಳವಳಿಗಳಿಗೆ ಸಹಪ್ರೇರಕವಾಗಿವೆ. ವಿಶುಕುಮಾರ್ ಅವರ 'ಕರಾವಳಿ' ಕಾದಂಬರಿ ಈ ನಿಟ್ಟಿನಲ್ಲಿ ಅತ್ಯಂತ ಪ್ರಸ್ತುತವೆನಿಸುತ್ತದೆ.

**ಸಮಕಾಲೀನ ಸಂದರ್ಭದಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳ ಅಗತ್ಯತೆ**

ಇಂದಿನ ವಾಣಿಜ್ಯ ಪ್ರಧಾನ ಚಿತ್ರರಂಗದಲ್ಲಿ ಸಾಹಿತ್ಯಾಧಾರಿತ ಸಿನಿಮಾಗಳ ಸಂಖ್ಯೆ ಕಡಿಮೆಯಾಗುತ್ತಿರುವುದು ಗಮನಾರ್ಹ. ಆದರೂ ಸಮಾಜದಲ್ಲಿ ಹೆಚ್ಚುತ್ತಿರುವ ಮೌಲ್ಯ ಸಂಕಟಗಳು, ಸಾಂಸ್ಕೃತಿಕ ಗೊಂದಲಗಳು ಸಾಹಿತ್ಯಾಧಾರಿತ ಸಿನಿಮಾಗಳ ಅಗತ್ಯತೆಯನ್ನು ಮತ್ತಷ್ಟು ಹೆಚ್ಚಿಸುತ್ತವೆ. ಓದುಗರ ಸಂಖ್ಯೆ ಕುಗ್ಗುತ್ತಿರುವ ಇಂದಿನ ಕಾಲದಲ್ಲಿ, ಕಾದಂಬರಿ ಆಧಾರಿತ ಸಿನಿಮಾಗಳು ಸಾಹಿತ್ಯವನ್ನು ಜನಪ್ರಿಯಗೊಳಿಸುವ ಪರಿಣಾಮಕಾರಿ ಮಾಧ್ಯಮವಾಗಬಹುದು.

ಇಂದಿನ ಸಮಕಾಲೀನ ಸಮಾಜವು ತೀವ್ರವಾದ ಬದಲಾವಣೆ, ತಂತ್ರಜ್ಞಾನಾಧಾರಿತ ಬದುಕಿನ ಒತ್ತಡಗಳನ್ನು ಅನುಭವಿಸುತ್ತಿದೆ. ಜಾಗತೀಕರಣ, ನಗರೀಕರಣ, ಮಾಧ್ಯಮಗಳ ಅತಿರೇಕ ಮತ್ತು ವಾಣಿಜ್ಯ ಮನೋಭಾವನೆಗಳು ಮಾನವ ಸಂಬಂಧಗಳು, ಕೊಳ್ಳುಬಾಕತನ ಸಂಸ್ಕೃತಿ ಇವೆಲ್ಲ ನೈತಿಕ ಮೌಲ್ಯಗಳ ಮೇಲೆ ಆಳವಾದ ಪ್ರಭಾವ ಬೀರುತ್ತಿವೆ. ಇಂತಹ ಸಂದರ್ಭದಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳು ಸಮಾಜಕ್ಕೆ ಅಗತ್ಯವಾದ ವಿಮರ್ಶಾತ್ಮಕ ದೃಷ್ಟಿಕೋನವನ್ನು ಒದಗಿಸುವ ಮಹತ್ವದ ಮಾಧ್ಯಮಗಳಾಗಿ ಕಾಣಿಸುತ್ತದೆ.

ಮೌಲ್ಯಾಧಾರಿತ ಕಥನಗಳ ಪ್ರಸ್ತುತಿಗೆ ಕಾದಂಬರಿ ಆಧಾರಿತ ಸಿನಿಮಾಗಳು ಅತ್ಯಂತ ಅಗತ್ಯವಾಗಿವೆ. ಇಂದಿನ ವಾಣಿಜ್ಯ ಚಿತ್ರರಂಗವು ಹೆಚ್ಚಿನ ಪ್ರಮಾಣದಲ್ಲಿ ತಕ್ಷಣದ ಮನರಂಜನೆ, ದೃಶ್ಯ ವೈಭವ ಮತ್ತು ಮಾರುಕಟ್ಟೆ ಯಶಸ್ಸಿನತ್ತ ಗಮನಹರಿಸುತ್ತಿರುವುದರಿಂದ, ಜೀವನದ ಆಂತರಿಕ ಮೌಲ್ಯಗಳು ಮತ್ತು ಮಾನವೀಯ ಮೌಲ್ಯಗಳು ತೆರೆಗೆ ಸರಿಯುತ್ತಿವೆ. ಆದರೆ ಕಾದಂಬರಿಗಳು ಸಮಾಜದ ನೈಜ ಬದುಕನ್ನು ಆಳವಾಗಿ ದಾಖಲಿಸಿರುವುದರಿಂದ, ಅವು ಪ್ರೇಕ್ಷಕರಿಗೆ ಚಿಂತನೆಗೆ ದಾರಿಮಾಡಿಕೊಡುತ್ತದೆ. ಇತ್ತೀಚಿನ ದಿನಗಳಲ್ಲಿ ಒಂದಷ್ಟು ಕಲಾತ್ಮಕ ಚಿತ್ರಗಳು ಬಂದು ಬದಲಾವಣೆಯ ದಾರಿಯಲ್ಲಿ ನಡೆಯುತ್ತಿದೆ.

ಓದು ಸಂಸ್ಕೃತಿಯ ಕುಸಿತಕ್ಕೆ ಪ್ರತಿರೋಧವಾಗಿ ಕಾದಂಬರಿ ಆಧಾರಿತ ಸಿನಿಮಾಗಳು ಕಾರ್ಯನಿರ್ವಹಿಸುತ್ತವೆ. ಡಿಜಿಟಲ್ ಯುಗದಲ್ಲಿ ಯುವಪೀಳಿಗೆ ಓದಿನಿಂದ ದೂರವಾಗುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಈ ಹಿನ್ನೆಲೆಯಲ್ಲಿ, ಸಿನಿಮಾಗಳು ಕಾದಂಬರಿಗಳತ್ತ ಆಸಕ್ತಿಯನ್ನು ಹೆಚ್ಚಿಸಿ ಕಲಾತ್ಮಕ ಸಿನಿಮಾಗಳಿಗೆ ಒತ್ತು ನೀಡಬೇಕು. ಚಿತ್ರರಂಗದ ಕಲಾತ್ಮಕ ಮಟ್ಟವನ್ನು ಉತ್ತೇಜಿಸುವಲ್ಲಿ ಕಾದಂಬರಿ ಆಧಾರಿತ

ಸಿನಿಮಾಗಳ ಪಾತ್ರ ಅಪಾರವಾಗಿದೆ. ಸಾಹಿತ್ಯಾಧಾರಿತ ಕಥೆಗಳು ನಿರ್ದೇಶಕರಿಗೆ ಗಂಭೀರ ಕಥಾವಸ್ತು, ಮನಮುಟ್ಟುವ ಪಾತ್ರಗಳು ಹಾಗೂ ನೈಜತೆಯನ್ನು ಒದಗಿಸುತ್ತವೆ. ಇದರಿಂದ ಚಿತ್ರರಂಗವು ಕೇವಲ ವಾಣಿಜ್ಯ ಚೌಕಟ್ಟಿನಲ್ಲಿ ಸೀಮಿತವಾಗದೆ, ಕಲಾತ್ಮಕವಾಗಿ ಉನ್ನತ ಹಂತವನ್ನು ತಲುಪಲು ಸಹಾಯಕವಾಗುತ್ತದೆ.

ಸಮಕಾಲೀನ ಸಂದರ್ಭದಲ್ಲಿ ಕಾದಂಬರಿ ಆಧಾರಿತ ಸಿನಿಮಾಗಳು ಸಮಾಜಕ್ಕೆ ಕನ್ನಡಿಯಂತೆ ಕಾರ್ಯನಿರ್ವಹಿಸುತ್ತವೆ. ಇವು ಮನರಂಜನೆಯೊಂದಿಗೆ ಜಾಗೃತಿ, ಚಿಂತನೆ ಮತ್ತು ಸಂಸ್ಕೃತಿಯ ಸಂರಕ್ಷಣೆಯನ್ನು ಸಾಧಿಸುವ ಶಕ್ತಿಯನ್ನು ಹೊಂದಿವೆ. ಆದ್ದರಿಂದ, ಇಂದಿನ ಹಾಗೂ ಭವಿಷ್ಯದ ಕನ್ನಡ ಚಿತ್ರರಂಗವು ಸಾಹಿತ್ಯಾಧಾರಿತ ಸಿನಿಮಾಗಳನ್ನು ಮತ್ತಷ್ಟು ಪ್ರೋತ್ಸಾಹಿಸುವ ಅಗತ್ಯ ತೀವ್ರವಾಗಿ ಕಾಣಿಸುತ್ತದೆ. ಸಾಹಿತ್ಯ ಮತ್ತು ಸಿನಿಮಾ ಎರಡೂ ವಿಭಿನ್ನ ಮಾಧ್ಯಮಗಳಾಗಿದ್ದರೂ, ಪರಸ್ಪರ ಪೂರಕವಾಗಿವೆ. ಕಾದಂಬರಿಯಲ್ಲಿರುವ ಆಂತರಿಕ ಮನೋಭಾವಗಳನ್ನು ದೃಶ್ಯರೂಪದಲ್ಲಿ ಕಟ್ಟಿಕೊಡುವುದು ನಿರ್ದೇಶಕರ ಸೃಜನಶೀಲತೆಯ ಪರೀಕ್ಷೆಯಾಗಿದೆ. ಕೆಲವೊಮ್ಮೆ ಕಾದಂಬರಿಯ ಮೂಲ ಆಶಯ ಉಳಿಸಿಕೊಂಡು ಹೊಸ ವ್ಯಾಖ್ಯಾನ ನೀಡುವ ಪ್ರಯತ್ನವೂ ನಡೆಯಬೇಕು.

**ಪರಾಮರ್ಶನ ಗ್ರಂಥಗಳು:**

1. ರಾಮದಾಸ ನಾಯ್ಡು ಪಿ.ಆರ್., (2013), ವಿಶ್ವ ಸಿನಿಮಾ–ಸಮಗ್ರ ಅಧ್ಯಯನ ಮಾಲಿಕೆ, ಬೆಂಗಳೂರು: ಆಕೃತಿ ಬುಕ್ಸ್ ಪ್ರೈ.ಲಿ.
2. ಅರವಿಂದ ಬಿಜೈ, (2022), ತುಳು ಸಿನಿಮಾ ಒಂದು ಅಧ್ಯಯನ, ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ.
3. ಮಾನಸ ಕೆ.ವಿ., (2013), ಕಾದಂಬರಿ ಆಧಾರಿತ ಚಲನಚಿತ್ರಗಳ ಅಧ್ಯಯನ (ಸಂಶೋಧನಾ ಪ್ರಬಂಧ), ಶಂಕರಘಟ್ಟ: ಕುವೆಂಪು ವಿಶ್ವವಿದ್ಯಾನಿಲಯ.
4. ಮುರಳೀಧರ ಉಪಾಧ್ಯ ಹಿರಿಯಡಕ, (2018), ವೈದೇಹಿ ಜೀವನ ಮತ್ತು ಕೃತಿಗಳ ಸಮೂಹ ಶೋಧ, ಬೆಂಗಳೂರು: ಅಭಿನವ ಪ್ರಕಾಶನ.
5. ಸವಿತಾ ನಾಗಭೂಷಣ ಮತ್ತು ತಾರಿಣಿ ಶುಭದಾಯಿನಿ (ಸಂ), (2019), ಇರುವಂತಿಗೆ–ವೈದೇಹಿ ಗೌರವ ಗ್ರಂಥ, ಶಿವಮೊಗ್ಗ: ವೈದೇಹಿ ಗೌರವ ಗ್ರಂಥ ಸಮಿತಿ.
6. https://kannadasahityaparishattu.in